**ಪತ್ನಿ:** ರೀ... ಇವತ್ತು ಸಂಜೆ ಕೇಂದ್ರ ಕಾರಾಗೃಹದಲ್ಲಿ ನನ್ನ ಸಂಗೀತ ಕಛೇರಿಯಿದೆ.
**ಪತಿ:** ಓಹೋ, ಅಲ್ಲಿನ ಕೈದಿಗಳ ಶಿಕ್ಷೆಯನ್ನು ಇನ್ನಷ್ಟು ಖಡಕ್‌ಗೊಳಿಸಿದ್ದಾರೋ ಹೇಗೆ?

***

**ಅತ್ತೆ:** ಇದು ನಿನ್ನ ತಾಯಿಯ ಮನೆಯಲ್ಲ, ಇಲ್ಲಿ ಶಿಸ್ತಿನಿಂದ ಇರಬೇಕು ಸೊಸೆ ಮುದ್ದು.
**ಸೊಸೆ:** ನಿಮ್ಮ ತಾಯಿಯ ಮನೆಯೂ ಅಲ್ಲ ತಾನೇ. ನೀವೂ ಶಿಸ್ತಿನಿಂದ ಇರುವುದನ್ನು ಕಲಿಯಬೇಕು ಅತ್ತೆಮ್ಮಾ.

***




**ಪತಿ:** 'ನನ್ನ ಮದುವೆಯಾಗಿದೆ' ಎಂದು ನಾನು ಖುಷಿಯಿಂದ ಫೇಸ್‌ಬುಕ್ ಗೋಡೆಯಲ್ಲಿ ಬರೆದಿದ್ದೆ.
**ಪತ್ನಿ:** ಹೌದಾ? ನಿಮ್ಮ ಮಿತ್ರರೆಲ್ಲಾ ಲೈಕ್, ಕಾಮೆಂಟ್ ಮಾಡಿದ್ದಾರಾ?
**ಪತಿ:** ಲೈಕ್ ಇಲ್ಲ. ಆದ್ರೆ ಕಾಮೆಂಟ್ ಮಾಡಿದ್ದಾರೆ.
**ಪತ್ನಿ:** ಏನಂತ?
**ಪತಿ:** ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಮ್ಮ ಜೊತೆ ಹಂಚಿಕೊಳ್ಳಬೇಡಿ ಅಂತ.

***

**ಪತ್ನಿ:** ರೀ... ಈ ಬಾರಿ ನಮ್ಮ ಮದುವೆ ವಾರ್ಷಿಕೋತ್ಸವದಂದು ನಾವು ಇನ್ನೊಮ್ಮೆ ಮದುವೆಯಾಗೋಣವೆ?
**ಪತಿ:** ಖಂಡಿತಾ ಕಣೆ. ಆದರೆ ಈ ಬಾರಿ ಯಾರ ಒತ್ತಡಕ್ಕೂ ಮಣಿಯದೆ ಮದುವೆಯಾಗೋಣ.
**ಪತ್ನಿ:** ಹಾಗಂದರೆ?
**ಪತಿ:** ಈ ಬಾರಿ ನಾವು ವಿಚಾರಪೂರ್ವಕವಾಗಿ ಸಂಗಾತಿಯನ್ನು ಆಯ್ಕೆ ಮಾಡುವ ಅಂದೆ.

***




**ಅಮ್ಮ:** ನೀನು ಓದುವುದರಲ್ಲಿ ತುಂಬಾ ಹುಷಾರಾಗಿರುವೆ ತಾನೆ, ಮತ್ತೇಕೆ ನಿನಗೆ ಟ್ಯೂಷನ್ ಬೇಕು?
**ಮಗ:** ಅಮ್ಮಾ, ನೀನೂ ಮನೆಕೆಲಸಗಳಲ್ಲಿ ಹುಷಾರಾಗಿರುವೆ, ಆದರೂ ಮನೆಗೆಲಸದವಳನ್ನು ಇಟ್ಟುಕೊಳ್ಳುವ ಅವಶ್ಯಕತೆಯೇನು?
(ಅಮ್ಮ ಗಪ್ ಚುಪ್!)

ನಡುರಾತ್ರಿಯ ಪಾರ್ಟಿಯ ಬಳಿಕ ಪತಿ ಪತ್ನಿ ತಮ್ಮ ಕಾರಿನಲ್ಲಿ ಮನೆಗೆ ಹಿಂತಿರುಗುತ್ತಿದ್ದಾಗ ಅವರನ್ನು ಪೊಲೀಸರು ತಡೆದು ಡ್ರೈವಿಂಗ್ ಲೈಸೆನ್ಸ್ ಮತ್ತಿತರ ಕಾಗದಪತ್ರ ಪರಿಶೀಲನೆ ಮಾಡಿದರು. ಬಳಿಕ...
ಪೊಲೀಸ್: ಜೊತೆಗಿರುವ ಈ ಲಲನೆ ಯಾರು?
ಪತಿ: ನನ್ನ ಪತ್ನಿ.
ಇನ್ಸ್‌ಪೆಕ್ಟರ್: ಪುರಾವೆ ಏನಿದೆ?
ಪತಿ: (ಇನ್ಸ್‌ಪೆಕ್ಟರ್ ಅನ್ನು ಪಕ್ಕಕ್ಕೆ ಕರೆದು ಪಿಸುಮಾತಿನಲ್ಲಿ ನುಡಿದ) ನೀವು ಹೇಗಾದರೂ ಮಾಡಿ ಈಕೆ ನನ್ನ ಪತ್ನಿ ಅಲ್ಲವೆಂದು ಸಾಬೀತುಪಡಿಸಿದರೆ ಬೊಮ್ಮಸಂದ್ರದಲ್ಲಿರುವ ಸೈಟು ನಿಮ್ಮದು.

**ಪತಿ:** ಸ್ಕೂಟರ್ ಸವಾರಿಯ ಲೈಸೆನ್ಸ್ ಇಲ್ಲವೆಂದು ನೀನೇಕೆ ದಂಡ ತೆತ್ತು ಬಂದೆ? ನಿನ್ನ ಬಳಿ ಲೈಸೆನ್ಸ್ ಇತ್ತಲ್ಲವೆ?
**ಪತ್ನಿ:** ಆ ಲೈಸೆನ್ಸ್ ಮೇಲಿನ ನನ್ನ ಫೋಟೊ ಚೆನ್ನಾಗಿಲ್ಲ ಕಣ್ರೀ. ಅದಕ್ಕೆ ಅದನ್ನು ಸಂಚಾರ ಪೊಲೀಸರಿಗೆ ತೋರಿಸಲಿಲ್ಲ.

***

ವಿವಾಹಿತ ಗುಂಡನ ಸ್ವಗತ... ಓರ್ವ ಸ್ತ್ರೀ ವಿವಾಹಾನಂತರ ತನ್ನ ಮನೆಮಂದಿ, ಬಂಧು ಬಳಗವನ್ನು ತೊರೆದು ಒಬ್ಬಳೇ ಬೇರೆ ಮನೆಗೆ ಬರುತ್ತಾಳೆ. ಇದು ನಿಜಕ್ಕೂ ದೊಡ್ಡ ತ್ಯಾಗವೇ ಹೌದು. ಆದರೆ ಅಂತಹ ಒಬ್ಬಾಕೆ ಸ್ತ್ರೀಯ ಕೈಯಲ್ಲಿ ತನ್ನ ಸ್ವಂತದ ಮನೆ, ಸಂಪತ್ತು ಮತ್ತು ಬಹುಮುಖ್ಯವಾಗಿ ತನ್ನ ಸ್ವಾತಂತ್ರ್ಯ ಕೊಟ್ಟು ಬಿಡುವ ಪುರುಷನ ಮಹಾ ತ್ಯಾಗದ ಬಗ್ಗೆ ಯಾರಿಗೂ ಏನೂ ಅನ್ನಿಸದಿರುವುದು ಆಶ್ಚರ್ಯಕರ ಸಂಗತಿ.




***

**ಅನಿತಾ:** ಅಲ್ಲ ಕಣೇ, ಬಾಯ್ ಫ್ರೆಂಡ್ ಜೊತೆ ಬ್ರೇಕ್ ಅಪ್ ಮಾಡಿಕೊಂಡಿರುವುದರ ಫಲವನ್ನು ನಾನೀಗ ಅನುಭವಿಸುತ್ತಿದ್ದೇನೆ.
**ಗೀತಾ:** ಅಂಥಾದ್ದೇನಾಯಿತೆ?
**ಅನಿತಾ:** ಈಗ ನನ್ನ ಐಸ್ ಕ್ರೀಮ್, ಬರ್ಗರ್, ಪಿಜ್ಜಾ ಇತ್ಯಾದಿಗಳ ಬಿಲ್ ನಾನೇ ಭರಿಸಬೇಕಾಗಿದೆ.

***

**ಕನ್ನಡ ಟೀಚರ್:** ನಿನ್ನ ಮನೆ ಭಾಷೆ ಯಾವುದು?
**ಗುಂಡ:** ತುಳು.
**ಟೀಚರ್:** ತುಳುವಿನಲ್ಲಿ ಸೊಳ್ಳೆಯನ್ನು ಏನೆಂದು ಕರೆಯುತ್ತೀರಿ?
**ಗುಂಡ:** ನಾವು ಸೊಳ್ಳೆಗಳನ್ನು ಕರೆಯುವುದಿಲ್ಲ. ಅವು ತಮ್ಮಷ್ಟಕ್ಕೇ ಮನೆಯೊಳಗೆ ಬರುತ್ತವೆ.

***

ಗುಂಡ ಆಸ್ಪತ್ರೆಗೆ ದಾಖಲಾಗಿದ್ದ. ನರ್ಸ್ ಬಂದು ಸ್ತೆತಾಸ್ಕೋಪ್ ಹಿಡಿದು ಆತನ ಎದೆ ಮೇಲಿರಿಸಿ ತಪಾಸಿಸುತ್ತಾ ಹೇಳಿದಳು...
**ನರ್ಸ್:** ದೀರ್ಘ ಶ್ವಾಸ ಎಳೆಯಿರಿ ಮತ್ತು ನಿಧಾನವಾಗಿ ಹೊರ ಬಿಡಿ.
**ತಾತ:** ಆಯ್ತು ನರ್ಸಮ್ಮ.
**ನರ್ಸ್:** ಈಗ ಹೇಗನ್ನಿಸುತ್ತದೆ?
**ಗುಂಡ:** ತುಂಬಾ ಆಹ್ಲಾದಕರವಾಗಿದೆ. ನೀವು ಹಾಕಿರುವುದು ಯಾವ ಪರ್ಫ್ಯೂಮ್?

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್, ಮುಂಬೈ